# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಭಾನುವಾರ, ಮೇ 16 , 2021

ಸಂಪುಟ : 48 ಸಂಚಿಕೆ : 02 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


## ಸರ್ಕಾರಗಳ ನಿರ್ಲಕ್ಷ್ಯದಿಂದ ಸಾವು ಹೆಚ್ಚಳ



**ಕಾಂಗ್ರೆಸ್ ಹೈಕಮಾಂಡ್‌ನ ಆನ್‌ಲೈನ್ ಸಭೆಯಲ್ಲಿ ಎಸ್ಸೆಸ್ಸೆಂ ಆರೋಪ**

ದಾವಣಗೆರೆ, ಮೇ 15- ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಿರ್ಲಕ್ಷ್ಯದಿಂದಾಗಿ ಸಮರ್ಪಕವಾಗಿ ಆಕ್ಸಿಜನ್, ಲಸಿಕೆ ಮತ್ತು ರೆಮ್‌ಡಿಸಿವಿರ್ ಚುಚ್ಚು ಮದ್ದು ಸಿಗದೇ ಇರುವುದರಿಂದ ಕೊರೊನಾ ರೋಗಿಗಳು ಹೆಚ್ಚಾಗುವುದರ ಜೊತೆಗೆ ಸಾವಿನ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ ಎಂದು ಮಾಜಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ದೂರಿದರು.

ಇಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾರವರು ದಾವಣಗೆರೆ ನಗರದ ಶಾಸಕರು, ಮಾಜಿ ಸಚಿವರೊಂದಿಗೆ ಆನ್‌ಲೈನ್ ಜೂಮ್ ಆ್ಯಪ್ ಮೂಲಕ ಸಂವಾದ ಸಭೆ ನಡೆಸಿದ ವೇಳೆ ಮಲ್ಲಿಕಾರ್ಜುನ್ ಅವರು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಿರ್ಲಕ್ಷ್ಯ ಧೋರಣೆಯನ್ನು ಸವಿವರವಾಗಿ ವಿವರಿಸಿದರು.

ಕೊರೊನಾ ಎರಡನೇ ಅಲೆಯನ್ನು ಆರಂಭದಲ್ಲಿ ಸಂಪೂರ್ಣ ನಿರ್ಲಕ್ಷಿಸಿದ **(2ನೇ ಪುಟಕ್ಕೆ)**


**ಜಮೀನು ಮಾರಾಟಕ್ಕಿದೆ**

ಹಿರೇಮೇಗಳಗೆರೆ ಸಮೀಪದಲ್ಲಿ 5.53 ಮತ್ತು 6.55 ಎಕರೆ ಕಾರ್ನರ್ ಒಟ್ಟು ವಿಸ್ತೀರ್ಣ 12.08 ಎಕರೆ, ಕೆಂಪು ಮಣ್ಣಿನ ಜಮೀನು ಮಾರಾಟಕ್ಕಿದೆ. 3 ಬೋರ್‌ಗಳಿವೆ. ಕಾಡಜ್ಜಿ ಕೃಷಿ ವಿಜ್ಞಾನ ಕೇಂದ್ರದಿಂದ 3 ಕಿಲೋಮಿಟರ್‌ದಲ್ಲಿದೆ. ದಾವಣಗೆರೆಯಿಂದ 10 ಕಿ.ಮೀ.ನಲ್ಲಿದೆ.

ಬೂಸ್ನೂರು ಕಿರಣ್ (ಏಜೆಂಟ್)
98440 63409, 97315 63409


## ಭದ್ರಾ : ಮೇ 20 ರವರೆಗೆ ನೀರು ಮುಂದುವರಿಕೆ

ದಾವಣಗೆರೆ, ಮೇ 15- ಭದ್ರಾ ಜಲಾಶಯದಿಂದ ನೀರು ಸ್ಥಗಿತಗೊಳಿಸುವ ನಿರ್ಧಾರವನ್ನು ಕಾಡಾ ಮುಂದೂಡಿ, ಮೇ 20 ರವರೆಗೆ ನೀರು ಹರಿಸಲು ನಿರ್ಧರಿಸಿದೆ ಎಂದು ಭದ್ರಾ ಕಾಡಾ ಸಮಿತಿ ಅಧ್ಯಕ್ಷರಾದ ಪವಿತ್ರ ರಾಮಯ್ಯ ತಿಳಿಸಿದ್ದಾರೆ.

ಭದ್ರಾ ಎಡದಂಡೆ ಮತ್ತು ಬಲದಂಡೆ ನಾಲೆಗಳ ಮೂಲಕ ಹರಿಸುತ್ತಿರುವ ನೀರನ್ನು ಜ. 12 ರಿಂದ 120 ದಿನಗಳ ಕಾಲ ಅಂದರೆ ಮೇ 12 ಕ್ಕೆ ನಿಲ್ಲಿಸಲು ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಕಾಡಾ) 2020ರ ಡಿ.12 ರಂದು ಹರಿಹರ ತಾಲ್ಲೂಕು ಮಲೇಬೆನ್ನೂರಿನ ಕರ್ನಾಟಕ ನೀರಾವರಿ ನಿಗಮದಲ್ಲಿ ನಡೆದ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ನಿರ್ಧರಿಸಿತ್ತು.

ಕೊರೊನಾ ಸಂಕಷ್ಟದ ಸಮಯದಲ್ಲಿ ಭದ್ರಾ ಅಚ್ಚುಕಟ್ಟು ಭಾಗದ ರೈತರು ಒತ್ತಾಯಿಸಿದ ಪರಿಣಾಮ, ಮೇ 20 ರ ಮಧ್ಯರಾತ್ರಿ ನಾಲೆಗಳಿಗೆ ಹರಿಸುತ್ತಿರುವ ನೀರನ್ನು ನಿಲ್ಲಿಸುವಂತೆ ಅಧಿಸೂಚನೆ ಹೊರಡಿಸಲಾಗಿದೆ.

2021ನೇ ಸಾಲಿನಲ್ಲಿ ಶಿವಮೊಗ್ಗ ತಾಲ್ಲೂಕಿನಲ್ಲಿ 4,295 ಹೆಕ್ಟೇರ್ ಹಾಗೂ **(2ನೇ ಪುಟಕ್ಕೆ)**

# ಮನೆ ಚಿಕಿತ್ಸೆಗೆ ಕಡಿವಾಣ

## ಗ್ರಾಮೀಣರು, ಕೊಳಗೇರಿ ವಾಸಿಗಳಿಗೆ ಕೋವಿಡ್ ಕೇರ್ ಕೇಂದ್ರ



ಬೆಂಗಳೂರು, ಮೇ 15 - ಗ್ರಾಮೀಣ ಹಾಗೂ ನಗರ ಪ್ರದೇಶಗಳ ಕೊಳಗೇರಿಗಳಲ್ಲಿರುವ ಕೊರೊನಾ ಸೋಂಕಿತರನ್ನು ಹೋಮ್ ಐಸೋಲೇಷನ್ ಮಾಡದಿರಲು ನಿರ್ಧರಿಸಿರುವ ಸರ್ಕಾರ, ಅಂತಹ ಪ್ರದೇಶ ಗಳ ಎಲ್ಲ ಸೋಂಕಿತರನ್ನೂ ಕೋವಿಡ್ ಕೇರ್ ಕೇಂದ್ರಗಳಿಗೆ ಸ್ಥಳಾಂತರಿಸಿ ಚಿಕಿತ್ಸೆ ನೀಡುವ ಮಹತ್ವದ ನಿರ್ಧಾರ ಕೈಗೊಂಡಿದೆ.

ಬೆಂಗಳೂರಿನಲ್ಲಿ ಶನಿವಾರ ರಾಜ್ಯ ಕೋವಿಡ್ ಕಾರ್ಯಪಡೆ ಅಧ್ಯಕ್ಷರೂ ಆದ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರ ನೇತೃತ್ವದಲ್ಲಿ 4 ಗಂಟೆ ಕಾಲ ನಡೆದ ಕಾರ್ಯಪಡೆಯ ಸುದೀರ್ಘ ಸಭೆಯಲ್ಲಿ ಈ ಮಹತ್ವದ ನಿರ್ಧಾರಕ್ಕೆ ಬರಲಾಗಿದೆ.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಉಪ ಮುಖ್ಯಮಂತ್ರಿ, ಹಳ್ಳಿಗಳಲ್ಲಿ ವಾಸ ಮಾಡುವ ಸೋಂಕಿರನ್ನು ಯಾವುದೇ ಕಾರಣಕ್ಕೂ ಅವರ ಮನೆಗಳಲ್ಲೇ ಕ್ವಾರಂಟೈನ್ **(2ನೇ ಪುಟಕ್ಕೆ)**

### ಸಮುದಾಯ ಆರೋಗ್ಯ ಕೇಂದ್ರದಲ್ಲಿ ಐಸಿಯು

**ರಾಜ್ಯದ 207 ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ತಲಾ 30 ಬೆಡ್‌ಗಳಿವೆ. ಇದರಲ್ಲಿ 10 ಬೆಡ್‌ಗಳನ್ನು ಐಸಿಯು ಬೆಡ್‌ಗಳನ್ನಾಗಿ ಪರಿವರ್ತನೆ ಮಾಡಲಾಗುವುದು. ತಾಲೂಕು ಆಸ್ಪತ್ರೆಗಳಲ್ಲಿ 50 ಐಸಿಯು ಬೆಡ್‌ಗಳ ವ್ಯವಸ್ಥೆ ಮಾಡಲಾಗುತ್ತಿದ್ದು, ಅದರಲ್ಲಿ 15 ಬೆಡ್‌ಗಳಿಗೆ ವೆಂಟಿಲೇಟರ್ ಸೌಲಭ್ಯ ಇರುತ್ತದೆ. ಇನ್ನು 6 ಬೆಡ್‌ಗಳನ್ನು ತಾಯಿ-ಮಕ್ಕಳಿಗೆ ಮೀಸಲಿಡಲಾಗುವುದು. ಮೆಡಿಕಲ್ ಕಾಲೇಜು ಇಲ್ಲದ ಜಿಲ್ಲಾ ಕೇಂದ್ರಗಳಲ್ಲಿ ತಲಾ 100 ಬೆಡ್ ಐಸಿಯು ಮಾಡಲು ಸಭೆಯಲ್ಲಿ ನಿರ್ಧರಿಸಲಾಯಿತು ಎಂದು ಉಪ ಮುಖ್ಯಮಂತ್ರಿ ಅಶ್ವತ್ಥ ನಾರಾಯಣ ತಿಳಿಸಿದ್ದಾರೆ.**

**ಪ್ರತಿ 400 ಬ್ಲ್ಯಾಕ್ ಫಂಗಸ್ ಸಾಧ್ಯತೆ**

ಕೋವಿಡ್‌ನಿಂದ ಗುಣಮುಖರಾದವರಲ್ಲಿ ಅದರಲ್ಲೂ ಮುಖ್ಯವಾಗಿ ಮಧುಮೇಹಿಗಳಲ್ಲಿ ಬ್ಲ್ಯಾಕ್ ಫಂಗಸ್ ಕಾಣಿಸಿಕೊಳ್ಳುತ್ತಿದೆ. ಇದನ್ನು ನಿಯಂತ್ರಿಸಲು ಕ್ರಮ ವಹಿಸಲಾಗಿದೆ. ಪ್ರತಿ ವಾರ 400 (2ನೇ ಪುಟಕ್ಕೆ)




**ಭಾವಪೂರ್ಣ ಶ್ರದ್ಧಾಂಜಲಿ**

ಶನಿವಾರ ನಿಧನರಾದ ದಾವಣಗೆರೆ ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯರು, ಬಸವೇಶ್ವರ ಸ್ಟೋನ್ ಕ್ರಷರ್ ಮಾಲೀಕರು, ನಮ್ಮ ಹಿತೈಷಿಗಳೂ ಆಗಿದ್ದ ಬೇವಿನಹಳ್ಳಿಯ (ಉಚ್ಚಂಗಿದುರ್ಗ)

**ಶ್ರೀ ಎಂ.ಟಿ. ಬಸವನಗೌಡ**

ಅವರಿಗೆ ನಮ್ಮೆಲ್ಲರ

**ಭಾವಪೂರ್ಣ ಶ್ರದ್ಧಾಂಜಲಿಗಳು.**

ಶ್ರೀಯುತರ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲಿ, ಅವರ ಕುಟುಂಬ ವರ್ಗಕ್ಕೆ ಈ ದುಃಖ ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಎ.ಎಂ. ಮಳಗಿ ಮತ್ತು ಕುಟುಂಬ ವರ್ಗ ಹಾಗು ಸಿಬ್ಬಂದಿ ವರ್ಗ

**ರೂಬಿ ಸ್ಟೋನ್ ಕ್ರಷರ್,**

ಗೌಳೇರಹಟ್ಟಿ.

**ಭಾವಪೂರ್ಣ ಶ್ರದ್ಧಾಂಜಲಿ**

ಶನಿವಾರ ನಿಧನರಾದ ದಾವಣಗೆರೆ ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯರು, ಬಸವೇಶ್ವರ ಸ್ಟೋನ್ ಕ್ರಷರ್ ಮಾಲೀಕರು, ನಮ್ಮ ಹಿತೈಷಿಗಳೂ ಆಗಿದ್ದ ಬೇವಿನಹಳ್ಳಿಯ (ಉಚ್ಚಂಗಿದುರ್ಗ)

**ಶ್ರೀ ಎಂ.ಟಿ. ಬಸವನಗೌಡ**

ಅವರಿಗೆ ನಮ್ಮೆಲ್ಲರ

**ಭಾವಪೂರ್ಣ ಶ್ರದ್ಧಾಂಜಲಿಗಳು.**

ಶ್ರೀಯುತರ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲಿ, ಅವರ ಕುಟುಂಬ ವರ್ಗಕ್ಕೆ ಈ ದುಃಖ ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಪಾಲುದಾರರು ಹಾಗು ಸಿಬ್ಬಂದಿ ವರ್ಗ

**ಶಿವಗಂಗಾ ಸ್ಟೋನ್ ಕ್ರಷರ್,**

ಹೆಬ್ಬಾಳು, ಎನ್‌ಹೆಚ್-4 .




# ಜಿ.ಪಂ. ಮಾಜಿ ಸದಸ್ಯ ಎಂ.ಟಿ. ಬಸವನಗೌಡ ನಿಧನ



ಬಳ್ಳಾರಿ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಬೇವಿನಹಳ್ಳಿ ಗ್ರಾಮದ ಹಿರಿಯ ಮುಖಂಡರೂ, ದಾವಣಗೆರೆ ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯರೂ, ಬಸವೇಶ್ವರ ಸ್ಟೋನ್ ಕ್ರಷರ್ ಮತ್ತು ನಂದಿ ಸ್ಟೋನ್ ಕ್ರಷರ್ ಹಾಗೂ ಶ್ರೀ ಬಸವೇಶ್ವರ ಪೆಟ್ರೋಲಿಯಂ ಮಾಲೀಕರೂ ಆದ

**ಶ್ರೀ ಎಂ.ಟಿ. ಬಸವನಗೌಡ** ಅವರು

ದಿನಾಂಕ 15.05.2021ರ ಶನಿವಾರ ಬೆಳಿಗ್ಗೆ 11.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ ಸುಮಾರು 62 ವರ್ಷ ವಯಸ್ಸಾಗಿತ್ತು.
ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 15.05.2021ರ ಶನಿವಾರ ಸಂಜೆ ಬೇವಿನಹಳ್ಳಿಯಲ್ಲಿರುವ ಮೃತರ ಸ್ವಂತ ತೋಟದಲ್ಲಿ ನೆರವೇರಿಸಲಾಯಿತು.

**- ದುಃಖತಪ್ತರು**

ಧರ್ಮಪತ್ನಿ : ಶ್ರೀಮತಿ ಚಂದ್ರಮ್ಮ

ಪುತ್ರರು : ಶ್ರೀಮತಿ ಶ್ವೇತಾ ಮತ್ತು ಓದೇಗೌಡ ಹಾಗೂ ಮಕ್ಕಳು
ಶ್ರೀಮತಿ ಪ್ರಜ್ಞಾ ಮತ್ತು ಯಶವಂತಗೌಡ ಹಾಗೂ ಮಕ್ಕಳು
ಮತ್ತು ಅಪಾರ ಬಂಧು-ಮಿತ್ರರು.

# ಸೋಂಕು ನಿವಾರಣೆಗೆ ನಗರಾದ್ಯಂತ ಸ್ಯಾನಿಟೈಸೇಷನ್‌ಗೆ ಮೇಯರ್ ಚಾಲನೆ



ದಾವಣಗೆರೆ, ಮೇ 15 - ಮಹಾನಗರ ಪಾಲಿಕೆಯ ವತಿಯಿಂದ ನಗರದ ಎಲ್ಲಾ 45 ವಾರ್ಡುಗಳಲ್ಲಿ ಕೋವಿಡ್ ಸೋಂಕನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮವಾಗಿ ಸ್ಯಾನಿಟೈಸೇಷನ್ ಕಾರ್ಯವನ್ನು ಶುಕ್ರವಾರ ಮಹಾಪೌರ ಎಸ್. ಟಿ. ವೀರೇಶ್ ಹಾಗೂ ಸ್ಥಾಯಿ ಸಮಿತಿ ಅಧ್ಯಕ್ಷ ಎಲ್. ಡಿ. ಗೋಣೆಪ್ಪ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಪೌರಕಾರ್ಮಿಕರಿಗೆ ಸುರಕ್ಷಾ ಧಿರಿಸುಗಳು, ವ್ಹೀಲ್‌ಬ್ಯಾರೋಗಳು ಮುಂತಾದ ಸ್ವಚ್ಛತಾ ಪರಿಕರಗಳನ್ನು ವಿತರಿಸಲಾಯಿತು. ಪೌರ ಕಾರ್ಮಿಕರು ದೈನಂದಿನ ಕೆಲಸ ಕಾರ್ಯ ಗಳೊಡನೆ ತಮ್ಮ ಆರೋಗ್ಯದ ಕಡೆಗೂ ಹೆಚ್ಚಿನ ಮುತು ವರ್ಜಿ ವಹಿಸುವಂತೆ ಮಹಾಪೌರರು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಆಯುಕ್ತ ವಿಶ್ವನಾಥ್ ಪಿ. ಮುದಜ್ಜಿ, ಪಶುವೈದ್ಯಾಧಿಕಾರಿ ಡಾ. ಸಂತೋಷ್, ಪಾಲಿಕೆ ಸದಸ್ಯರಾದ ಸೋಗಿ ಶಾಂತಕುಮಾರ್, ಜಯಮ್ಮ ಗೋಪಿನಾಯ್ಕ್, ಚಮನ್ ಸಾಬ್, ರೇಣುಕಾ ಶ್ರೀನಿವಾಸ್, ಸುಧಾ ಇಟ್ಟಿಗುಡಿ ಮಂಜುನಾಥ್, ಶಿವಲೀಲಾ ಕೊಟ್ರಯ್ಯ, ಶಿವನಗೌಡ ಪಾಟೀಲ್ ಮತ್ತಿತರರು ಹಾಜರಿದ್ದರು.

# ಬಸವ ಪಥ ಬದುಕಿನ ಪಥವಾದಾಗ ಜಗತ್ತಿನ ಉಳಿವು

## ವಿರಕ್ತ ಮಠದ ಸರಳ ಬಸವ ಜಯಂತಿಯಲ್ಲಿ ಬಸವಪ್ರಭು ಶ್ರೀ



ದಾವಣಗೆರೆ, ಮೇ 15- ಬಸವ ಪಥ ನಮ್ಮ ಬದುಕಿನ ಪಥವಾದಾಗ ಮಾತ್ರ ಮಾನವನ ಜೀವ, ಜೀವನ, ಜಗತ್ತು ಉಳಿಯಲು ಸಾಧ್ಯವಾಗುತ್ತದೆ ಎಂದು ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ತಿಳಿಸಿದರು.

ಅವರು, ಇಂದು ನಗರದ ವಿರಕ್ತಮಠದಲ್ಲಿ ಸರಳವಾಗಿ ಹಮ್ಮಿಕೊಂಡಿದ್ದ 109ನೇ ವರ್ಷದ ಬಸವ ಜಯಂತಿ ಆಚರಣೆ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಬಸವಣ್ಣನವರು ನೀಡಿದ ದಯವೇ ಧರ್ಮದ ಮೂಲವಯ್ಯ, ದಯವಿರಬೇಕು ಸಕಲ ಜೀವರಾಶಿಗಳಲ್ಲಿ ಎಂಬ ಆದರ್ಶವು ಈಗ ಪ್ರಸ್ತುತವಾಗಿದೆ. ಕೊರೊನಾ ಕಾಲಘಟ್ಟದಲ್ಲಿ ಪ್ರತಿ ವ್ಯಕ್ತಿಯು ದಯಾಮೂರ್ತಿಯಾಗಿ, ದಯೆಯನ್ನು ತನ್ನ ಸುತ್ತಲಿನ ಮನುಷ್ಯರಿಗೆ ಮತ್ತು ಸಕಲ ಜೀವರಾಶಿಗಳಿಗೆ ಧಾರೆ ಎರೆಯಬೇಕು. ತಾನು ಬದುಕಿ, ಪರರ ಬದುಕನ್ನು ಉಳಿಸುವ ಪಣತೊಡ ಬೇಕು. ಆಗ ಮಾತ್ರ ಜಗತ್ತಿನ ಜೀವರಾಶಿ ಉಳಿಯುತ್ತದೆ ಎಂದು ಮನವರಿಕೆ ಮಾಡಿದರು.

ಬಸವ ಪಥ ಎಂದರೆ ಬಸವಣ್ಣನವರು ನೀಡಿದ ಕಾಯಕ, ದಾಸೋಹ, ದಯೆ, ಸಮಾನತೆ ತತ್ವಗಳನ್ನು ಪ್ರತಿಯೊಬ್ಬರೂ ಪಾಲಿಸಿಕೊಂಡು ಬಂದರೆ ಜಗತ್ತಿನ ಜನರು, ಜೀವಕುಲ ಬದುಕುಳಿಯುತ್ತದೆ ಎಂದು ಹೇಳಿದರು.

ಯಾರು ಕಾಯಕ ತತ್ವವನ್ನು ಪಾಲಿಸಿಕೊಂಡು ಬರುವರೋ ಅವರು ಧನಿಕರಾಗುತ್ತಾರೆ ಮತ್ತು ಕಾಯಕದಿಂದ ಬಂದ ಹಣದಿಂದ ಸ್ವಲ್ಪ ಭಾಗವನ್ನು ದಾಸೋಹ ಮಾಡಿ ಹಸಿವು ಮುಕ್ತ ಸಮಾಜವನ್ನು ಕಟ್ಟಿದರು. ಬಸವಣ್ಣನವರಂತೆ ದಯಾಮೂರ್ತಿಗಳಾಗಿ ಜನರಿಗೆ ಸಹಾಯ ಮಾಡುವುದರೊಂದಿಗೆ ಜೀವ ಸಂಕುಲವನ್ನು ಹಾಗೂ ಜಗತ್ತನ್ನು ರಕ್ಷಿಸೋಣ, ಬಸವಣ್ಣನವರು ನಮ್ಮ ಬದುಕಿನಲ್ಲಿ ಪ್ರವೇಶವಾಗಲಿ ಎಂದರು.

**ಪ್ರಕೃತಿ ನಾಶದಿಂದ ಆಮ್ಲಜನಕದ ಸಂಕಷ್ಟ:** ಮಾನವ ತನ್ನ ಸ್ವಾರ್ಥಕ್ಕಾಗಿ ಗಿಡ, ಮರಗಳನ್ನು ಕಡಿದು ಹಾಕಿದ ಪರಿಣಾಮವಾಗಿ ಇಂದು ಮನುಷ್ಯನಿಗೆ ಕೊರೊನಾ ಸೋಂಕು ಬಂದು ಆಮ್ಲಜನಕಕ್ಕಾಗಿ ಪರಿತಪಿಸುತ್ತಿದ್ದಾನೆ. ಈಗಲಾದರೂ ಮಾನವ ಮಾನವೀಯತೆಯ ಮೂರ್ತಿಯಾಗಬೇಕು. ಅದನ್ನು ಬಸವಣ್ಣನವರು ಅಂದೇ ಹೇಳಿದ್ದರೆಂದರು.

ಸಮಾರಂಭದಲ್ಲಿ ವಿರಕ್ತಮಠ ಧರ್ಮದರ್ಶಿ ಸಮಿತಿಯ ಕಾರ್ಯದರ್ಶಿ ಕಣಕುಪ್ಪಿ ಮುರುಗೇಶಪ್ಪ, ಡಿ. ಬಸವರಾಜ್, ಎಸ್. ಓಂಕಾರಪ್ಪ, ನಸೀರ್ ಅಹಮದ್, ಲಂಬಿ ಮುರುಗೇಶಪ್ಪ, ಮಹಾದೇವಮ್ಮ, ಪಾರ್ವತಮ್ಮ, ಸುಜಾತಮ್ಮ, ವಿನಾಯಕ, ಶರಣ ಬಸವ, ಕುಮಾರಸ್ವಾಮಿ ಇತರರು ಇದ್ದರು.

ಶಿಕ್ಷಕ ರೋಷನ್ ನಿರೂಪಿಸಿ, ಸ್ವಾಗತಿಸಿದರು. ಶಿಕ್ಷಕ ಫಾರೂಖ್ ವಂದಿಸಿದರು.

# ಸೋಂಕಿತರನ್ನು ಭೇಟಿ ಮಾಡಿದ ಶಾಸಕ ರಾಮಪ್ಪ



ಹರಿಹರ, ಮೇ 15- ನಗರದ ಸಾರ್ವಜನಿಕ ಆಸ್ಪತ್ರೆಗೆ ಶನಿವಾರ ಭೇಟಿ ನೀಡಿದ ಶಾಸಕ ಎಸ್. ರಾಮಪ್ಪ ಅವರು ಕೊರೊನಾ ಸೋಂಕಿತರ ಕೊಠಡಿಗೆ ತೆರಳಿ, ಆಕ್ಸಿಜನ್ ಹಾಗೂ ಚಿಕಿತ್ಸೆ ನೀಡುತ್ತಿರುವುದನ್ನು ಪರಿಶೀಲಿಸಿದರು.

ಸೋಂಕಿತರಿಗೆ ಆತ್ಮಸ್ಥೈರ್ಯ ತುಂಬಿದ ಶಾಸಕ ರಾಮಪ್ಪ ಅವರು ನಂತರ ವೈದ್ಯರೊಂದಿಗೆ ಮಾತನಾಡಿ, ಸೋಂಕಿತರಿಗೆ ಸರಿಯಾಗಿ ಆಕ್ಸಿಜನ್ ಹಾಗೂ ಔಷಧಿಗಳನ್ನು ನೀಡುವಂತೆ ಸೂಚಿಸಿದರು. ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ಹನುಮಾನಾಯ್ಕ ಈ ವೇಳೆ ಹಾಜರಿದ್ದರು.

# ತೀವ್ರ ಸ್ವರೂಪ ಪಡೆದ ತೌಕ್ತೆ ಚಂಡಮಾರುತ

ಮುಂಬೈ, ಮೇ 15 – ಚಂಡಮಾರುತ ತೌಕ್ತೆ ತೀವ್ರ ಸ್ವರೂಪ ಪಡೆದುಕೊಂಡಿದ್ದು, ಅದು ಗುಜರಾತ್ ಕರಾವಳಿಯ ಕಡೆ ಧಾವಿಸುತ್ತಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಚಂಡಮಾರುತದಿಂದ ಮುಂಬೈ ಮೇಲೆ ಪರಿಣಾಮವಾಗುವುದಿಲ್ಲ. ಆದರೆ, ನಗರದಲ್ಲಿ ಬಿರುಸಿನ ಗಾಳಿ ಹಾಗೂ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ಶನಿವಾರ ರಾತ್ರಿ ಚಂಡಮಾರುತ ಅತ್ಯಂತ ತೀವ್ರ ಸ್ವರೂಪ ಪಡೆಯಲಿದೆ. ಮೇ 18ರಂದು ಅದು ಗುಜರಾತ್ ಕರಾವಳಿಯ ಪೋರ್‌ಬಂದರ್ ಹಾಗೂ ನಲಿಯಾಗಳ ನಡುವೆ ಅಪ್ಪಳಿಸಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ದೆಹಲಿಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಚಂಡಮಾರುತ ಎದುರಿಸುವ ಸಿದ್ಧತೆಗಳ ಪರಿಶೀಲನೆ ನಡೆಸಲಿದ್ದಾರೆ. ಅಗತ್ಯ ಸೇವೆಗಳಾದ ವಿದ್ಯುತ್, ದೂರಸಂಪರ್ಕ, ಆರೋಗ್ಯ ಹಾಗೂ ಕುಡಿಯುವ ನೀರಿನ ನಿರ್ವಹಣೆಗಾಗಿ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

# ಟಿವಿ ಸ್ಟೇಷನ್ ಕೆರೆಯಲ್ಲಿ ಮೀನುಗಳ ಮಾರಣ ಹೋಮ: ಖಂಡನೆ



ದಾವಣಗೆರೆ, ಮೇ 15- ನಗರಕ್ಕೆ ಕುಡಿಯುವ ನೀರೊದಗಿಸುತ್ತಾ ನಗರದ ಜೀವ ನಾಡಿಯಾಗಿರುವ ಟಿವಿ ಸ್ಟೇಷನ್ ಕೆರೆಯಲ್ಲಿ ಮೀನುಗಳ ಮರಣ ಮೃದಂಗವಾಗುತ್ತಿದೆ.

ಕೆರೆಯಲ್ಲಿ ಮೃತಪಟ್ಟ ಮೀನುಗಳು ನೀರಿನ ಮೇಲ್ಭಾಗದಲ್ಲಿ ತೇಲುತ್ತಿವೆ. ಇದು ವಾಯು ವಿಹಾರಿಗಳ ಕಣ್ಣಿಗೆ ಬಿದ್ದಿದ್ದು, ಬೇಸರ ವ್ಯಕ್ತಪಡಿಸಿದ್ದಾರೆ. ಕೆರೆಯಲ್ಲಿ ಕೆಲವು ದಿನಗಳಿಂದ ಸಾವಿರಾರು ಮೀನುಗಳ ಮಾರಣ ಹೋಮವಾಗಿದ್ದು, ನಗರ ಪಾಲಿಕೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ದಿವ್ಯ ನಿರ್ಲಕ್ಷ್ಯವೇ ಇದಕ್ಕೆ ಕಾರಣವೆಂದು ಕರುನಾಡ ರಕ್ಷಣಾ ವೇದಿಕೆ ಮತ್ತು ಗಂಗಾ ವಾಯುವಿಹಾರ ಬಳಗಗಳು ಖಂಡಿಸಿವೆ.

ನಗರಕ್ಕೆ ಕುಡಿಯುವ ನೀರು ಪೂರೈಸುವ ಈ ಕೆರೆಯನ್ನು ಪಾಲಿಕೆ ಹಾಗೂ ಜಿಲ್ಲಾಡಳಿತ ಸದಾ ನಿರ್ಲಕ್ಷ್ಯ ವಹಿಸಿದೆ. ಕುಂದುವಾಡ ಕೆರೆ ಅಭಿವೃದ್ಧಿಗೆ ಇತ್ತೀಚೆಗೆ ಕೋಟ್ಯಾಂತರ ರೂ. ಖರ್ಚು ಮಾಡಿದ್ದು, ಆದರೆ, ಟಿವಿ ಸ್ಟೇಷನ್ ಕೆರೆ ಬಗ್ಗೆ ಮಲತಾಯಿ ಧೋರಣೆ ಅನುಸರಿಸಲಾಗುತ್ತಿದೆ. ಈ ಭಾಗದ ಜನರು ಹಿಡಿಶಾಪ ಹಾಕುತ್ತಿರುವುದಾಗಿ ಕರುನಾಡ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಕೆ.ಟಿ. ಪ್ರಕಾಶ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸ್ಥಳಕ್ಕೆ ಜಿಲ್ಲಾಧಿಕರಿಗಳು ಭೇಟಿ ನೀಡಿ ಪರಿಶೀಲಿಸಿ, ಕೆರೆಯಲ್ಲಿ ಮೀನುಗಳ ಮಾರಣ ಹೋಮವನ್ನು ತಪ್ಪಿಸಿ, ಮುಂದೆ ಆಗಬಹುದಾದ ದುರಂತವನ್ನು ತಡೆಯಬೇಕೆಂದು ಆಗ್ರಹಿಸಿದ್ದಾರೆ.

# ಪಿಎಂ ಕೇರ್ಸ್ : ಎಲ್ಲಾ ಜಿಲ್ಲೆಗಳಲ್ಲಿ ಆಕ್ಸಿಜನ್ ಘಟಕಕ್ಕೆ ಅರ್ಜಿ

ನವದೆಹಲಿ, ಮೇ 15 – ಪಿಎಂ ಕೇರ್ಸ್ ನಿಧಿಯ ಮೂಲಕ ದೇಶದ ಎಲ್ಲಾ 738 ಜಿಲ್ಲೆಗಳಲ್ಲಿ ಆಕ್ಸಿಜನ್ ಘಟಕಗಳನ್ನು ಸ್ಥಾಪಿಸುವಂತೆ ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಲಾಗಿದೆ.

ಪಿಎಂ - ಕೇರ್ಸ್ ನಿಧಿಯ ಮೂಲಕ ತಕ್ಷಣವೇ ಆಕ್ಸಿಜನ್ ಘಟಕಗಳನ್ನು ಸ್ಥಾಪಿಸಬೇಕು. ಇದರಿಂದಾಗಿ ಬಡವರು ಉಚಿತವಾಗಿ ಆಕ್ಸಿಜನ್ ಪಡೆಯಲು ಸಾಧ್ಯವಾಗಲಿದೆ ಎಂದು ವಕೀಲ ವಿಪ್ಲ ಶರ್ಮ ಎಂಬುವವರು ಅರ್ಜಿ ದಾಖಲಿಸಿದ್ದಾರೆ. ಮುಂದಿನ ವಾರ ಅರ್ಜಿಯ ವಿಚಾರಣೆ ನಡೆಯಲಿದೆ.

# ಇ.ಎಸ್.ಐ ಆಸ್ಪತ್ರೆಯಲ್ಲಿ 80 ಬೆಡ್‌ಗಳ ಡಿಟಿಎಚ್‌ಸಿ ಕೇಂದ್ರ ಉದ್ಘಾಟನೆ



ದಾವಣಗೆರೆ, ಮೇ 15- ಇಎಸ್‌ಐ ಆಸ್ಪತ್ರೆಯಲ್ಲಿ 80 ಬೆಡ್‌ಗಳ ಡಿಟಿಎಚ್‌ಸಿ (ಡೆಡಿಕೇಟೆಡ್ ಕೋವಿಡ್ ಹೆಲ್ತ್‌ಕೇರ್ ಸೆಂಟರ್) ಅನ್ನು ನಗರಾಭಿವೃದ್ಧಿ ಹಾಗೂ ದಾವಣಗೆರೆ ಜಿಲ್ಲೆ ಉಸ್ತುವಾರಿ ಸಚಿವ ಬಿ.ಎ.ಬಸವರಾಜ್ ಅವರು ಉದ್ಘಾಟಿಸಿ ದರು. ಈ ಸಂದರ್ಭದಲ್ಲಿ ಸಂಸದ ಜಿ.ಎಂ.ಸಿದ್ದೇಶ್ವರ, ಶಾಸಕ ಎಸ್.ಎ.ರವೀಂದ್ರನಾಥ್, ಮಹಾಪೌರ ಎಸ್.ಟಿ.ವೀರೇಶ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ, ಡಿಹೆಚ್‌ಓ ಡಾ.ನಾಗರಾಜ್, ಸರ್ವೇಕ್ಷಣಾಧಿಕಾರಿ ಡಾ. ರಾಘವನ್, ಇಎಸ್‌ಐ ಆಸ್ಪತ್ರೆಯ ಸಿಬ್ಬಂದಿ ಉಪಸ್ಥಿತರಿದ್ದರು.

# ವೀರಶೈವ ಮಹಾಸಭಾದಿಂದ ಬಡ ಕುಟುಂಬಗಳಿಗೆ ಕಿಟ್ ವಿತರಣೆ



ದಾವಣಗೆರೆ, ಮೇ 15- ಅಖಿಲ ಭಾರತ ವೀರಶೈವ ಮಹಾಸಭಾ ವತಿಯಿಂದ ಜಗಜ್ಯೋತಿ ಬಸವೇಶ್ವರರ ಜಯಂತಿಯನ್ನು ಬಡ ಕುಟುಂಬಗಳಿಗೆ ಆಹಾರ ಸಾಮಗ್ರಿಗಳ ಕಿಟ್ ವಿತರಣೆ ಮಾಡುವ ಮೂಲಕ ಕಚೇರಿಯಲ್ಲಿ ಸರಳವಾಗಿ ಆಚರಿಸಲಾಯಿತು. ಮಹಾಸಭಾದ ಜಿಲ್ಲಾಧ್ಯಕ್ಷ ದೇವರಮನಿ ಶಿವಕುಮಾರ್ ಮಾತನಾಡಿ, ಜಗಜ್ಯೋತಿ ಬಸವೇಶ್ವರರ ಜೀವನ, ಅವರ ವಚನಗಳು, ತತ್ವಗಳು ಹಾಗೂ ಚಿಂತನೆಗಳು ಸರ್ವಕಾಲಕ್ಕೂ ದಾರಿದೀಪವಾಗಿವೆ. ನಾವೆಲ್ಲರೂ ಅವರು ಹಾಕಿ ಕೊಟ್ಟ ಮಾರ್ಗದಲ್ಲಿ ಸಾಗಿ, ಪ್ರಬುದ್ಧ ಮತ್ತು ಸ್ವಾಸ್ಥ್ಯ ಸಮಾಜದ ನಿರ್ಮಾಣಕ್ಕೆ ಶ್ರಮಿಸೋಣ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ದೇವರಮನಿ ಶಿವರಾಜ್, ಪಾಲಿಕೆ ಸದಸ್ಯರಾದ ಶಿವನಗೌಡ ಟಿ. ಪಾಟೀಲ್, ಇಟ್ಟಿಗುಡಿ ಮಹಾದೇವಪ್ಪ, ಜಯಪ್ರಕಾಶ್ ಮಾಗಿ, ಟಿಂಕರ್ ಮಂಜಣ್ಣ, ಮುರುಗೇಶ್ ಸೇರಿದಂತೆ ಇತರರು ಇದ್ದರು.

# ಗೋವಾ : ಖಾಸಗಿ ಆಸ್ಪತ್ರೆಗಳ ಪ್ರವೇಶ ಸರ್ಕಾರದ ವಶಕ್ಕೆ

ಪಣಜಿ, ಮೇ 15 – ಕೊರೊನಾ ರೋಗಿಗಳಿಗೆ ಚಿಕಿತ್ಸೆ ನೀಡುವ ಸಲುವಾಗಿ ರಾಜ್ಯದಲ್ಲಿರುವ ಎಲ್ಲಾ 21 ಖಾಸಗಿ ಆಸ್ಪತ್ರೆಗಳ ದಾಖಲಾತಿಯನ್ನು ವಶಕ್ಕೆ ತೆಗೆದುಕೊಳ್ಳಲು ಗೋವಾ ಸರ್ಕಾರ ನಿರ್ಧರಿಸಿದೆ.

ಸರ್ಕಾರದ ಕ್ರಮದಿಂದಾಗಿ ಗೋವಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಂತಹ ಕೇಂದ್ರಗಳ ಮೇಲಿನ ಹೊರೆ ಕಡಿಮೆಯಾಗಲಿದೆ ಎಂದು ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಹೇಳಿದ್ದಾರೆ. ಈ ಆಸ್ಪತ್ರೆಯಲ್ಲಿ ಕಳೆದ 4 ದಿನಗಳಲ್ಲಿ 75 ಕೊರೊನಾ ಸೋಂಕಿತರು ಸಾವನ್ನಪ್ಪಿದ್ದಾರೆ.

ಖಾಸಗಿ ಆಸ್ಪತ್ರೆಗಳು ಅರ್ಧದಷ್ಟು ಬೆಡ್ ಅನ್ನು ಕೊರೊನಾ ಸೋಂಕಿತರಿಗೆ ಮೀಸಲಿಡುತ್ತಿಲ್ಲ. ರಾಜ್ಯ ಸರ್ಕಾರದ ವಿಮಾ ಯೋಜನೆಯಡಿ ಖಾಸಗಿ ಆಸ್ಪತ್ರೆಗಳು ಚಿಕಿತ್ಸೆ ನೀಡದ ಘಟನೆಗಳು ಬೆಳಕಿಗೆ ಬಂದಿವೆ ಎಂದವರು ಹೇಳಿದ್ದಾರೆ.

ಆಸ್ಪತ್ರೆಗಳ ದಾಖಲಾತಿಯನ್ನು ಮಾತ್ರ ಸರ್ಕಾರ ವಶಕ್ಕೆ ತೆಗೆದುಕೊಳ್ಳಲಿದೆ. ಉಳಿದಂತೆ ಆಸ್ಪತ್ರೆಗಳ ನಿರ್ವಹಣೆ ಖಾಸಗಿಯವರ ವಶದಲ್ಲೇ ಇರಲಿದೆ ಎಂದು ಮುಖ್ಯಮಂತ್ರಿ ಸ್ಪಷ್ಟಪಡಿಸಿದ್ದಾರೆ.

## ಓದುಗರ ಪತ್ರ

### ಅಂತೂ ಅಕ್ಷಯ ತೃತೀಯದಂದು ಲಸಿಕೆ ಲಭಿಸಿತು

ಈ ಹಿಂದೆ ಮಾರ್ಚ್ 26 ರಂದು ಮೊದಲ ಡೋಸ್ ಕೋವ್ಯಾಕ್ಸಿನ್ ಚಿಗಟೇರಿ ಮಕ್ಕಳ ಮತ್ತು ಮಹಿಳಾ ಆಸ್ಪತ್ರೆಯಲ್ಲಿ ಪಡೆಯಲಾಗಿತ್ತು.

ಎರಡನೇ ಡೋಸ್ ಪಡೆಯಲು ಲಸಿಕಾ ಕೇಂದ್ರಕ್ಕೆ ಮೇ ತಿಂಗಳ ಮೊದಲ ವಾರ ಅಲೆದಾಡಿದ್ದೇ...ಅಲೆದಾಡಿದ್ದು. ಸರ್ಕಾರಿ ಲಸಿಕಾ ಕೇಂದ್ರದಲ್ಲಿ ಹಾಗೂ ಖಾಸಗಿ ಆಸ್ಪತ್ರೆಯಲ್ಲಿ ಕೋವ್ಯಾಕ್ಸಿನ್ ಇಲ್ಲವೇ ಇಲ್ಲ. ಕೋವ್ಯಾಕ್ಸಿನ್ ಲಸಿಕೆಯ ಅವಧಿ 28 ದಿನಗಳಿಂದ 42 ದಿನಗಳಲ್ಲಿ (2...3 ದಿನಗಳು ತಡವಾದರೂ ತೊಂದರೆ ಇಲ್ಲ) 2ನೇ ಡೋಸ್ ಪಡೆಯಲು ಬೆಳಿಗ್ಗೆ ಐದಾರು ಗಂಟೆಗೆ ಲಸಿಕಾ ಕೇಂದ್ರಕ್ಕೆ ಮೂರು ದಿನ... ನನ್ನ ಸರತಿ ಬಾರದಿದ್ದಾಗ ... ನೆನಪಾಗಿದ್ದು.. "ಮರಳಿ ಯತ್ನವ ಮಾಡು.. ಮರಳಿ ಯತ್ನವ ಮಾಡು.." ಎಸ್. ಜಿ ನರಸಿಂಹಚಾರ್ ಅವರ ಚೆಂದದ ನುಡಿಗಳ ಸಾಲುಗಳು.

ಇದರ ಪ್ರತಿಫಲವೋ ಏನೋ.... ದಿನಾಂಕ ಮೇ 14 ರಂದು ಬಸವ ಜಯಂತಿ ಹಾಗೂ ಅಕ್ಷಯ ತೃತೀಯ ಶುಭ ದಿನದಂದು... ಬೆಳಿಗ್ಗೆ ನಾಲ್ಕಕ್ಕೆ ಲಸಿಕಾ ಕೇಂದ್ರಕ್ಕೆ ದೌಡಾಯಿಸಿ ಹೋದಾಗ ನನ್ನ ಸರತಿ ಸಂಖ್ಯೆ 45. ನನ್ನ ಯತ್ನಕ್ಕೆ ಪ್ರತಿಫಲ ಸಿಕ್ಕೇ ಸಿಗುವುದೆಂದು. ಅಕ್ಷಯ ತೃತೀಯ ಶುಭ ದಿನ ಅಂದು ಕೋವ್ಯಾಕ್ಸಿನ್ಸ್ 2ನೇ ಲಸಿಕೆ ಸೇರಿತು ನನ್ನ ತೋಳ್ಬಲಕೆ....

ನನ್ನ ಬ್ಯಾಂಕ್ ಗೆಳೆಯ ಕೋವ್ಯಾಕ್ಸಿನ್ ಲಸಿಕೆಗೆಂದು ಬೆಳಗಿನ ಜಾವ 2.30 ಗಂಟೆಗೆ ಬಂದಿದ್ದು, ಲಸಿಕಾ ಟೋಕನ್ ನೀಡಿದ್ದು ಹತ್ತು ಗಂಟೆಗೆ... ಅದೆಷ್ಟೋ ಹಿರಿಯ ನಾಗರಿಕರು ಸರತಿಯಲ್ಲಿ ನಿಲ್ಲಲು ಕಷ್ಟ ಎಂದು ಕುಳಿತುಕೊಳ್ಳಲು ಮನೆಯಿಂದಲೇ ಕುರ್ಚಿ... ಸ್ಟೂಲ್ ತಂದಿದ್ದರು... ಕೆಲವರು ನಿಂತಿದ್ದರೆ... ಕೆಲವರು ಪೇಪರ್ ಹಾಕಿಕೊಂಡು ಕುಳಿತಿದ್ದರು.

ಸುಮಾರು 9 ಗಂಟೆಗೆ ಕೊರೊನಾ ವಾರಿಯರ್ಸ್‌ಗಳಿಗೆ ಆದ್ಯತೆಯ ಮೇರೆಗೆ ಲಸಿಕೆ ಪಡೆಯಲು ಮೊದಲು ಒಳಗೆ ಬಿಡುವುದನ್ನು ವಿರೋಧಿಸಿ ಗಲಾಟೆಯೂ ನಡೆಯಿತು. ನಂತರ ಸಾಮಾನ್ಯ ಸರತಿಯ 10 ಜನರನ್ನು....ಕೊರೊನಾ ವಾರಿಯರ್ಸ್ ಕೆಲವರನ್ನು ಒಳಗಡೆ ಬಿಟ್ಟಿದ್ದರಿಂದ ಮನೆಗೆ ಮರಳಿ ಬಂದಿದ್ದು 11.30 ಕ್ಕೆ. ಅಂತೂ ಮೊದಲ ಲಸಿಕೆ ಪಡೆದು 48 ನೇಯ ದಿನ 2 ನೇ ಡೋಸ್ ಕೋವ್ಯಾಕ್ಸಿನ್ ಲಸಿಕೆ ಸಿಕ್ಕಿತು.

**- ರಘುನಾಥರಾವ್ ತಾಪ್ಸೆ**, ದಾವಣಗೆರೆ.

# ಕೊರೊನಾಗೆ ಆಯುರ್ವೇದ ಔಷಧಿ

ಬೆಂಗಳೂರು, ಮೇ 15 - ಮದ್ಯ ತಯಾರಕ ಖೋಡೆ ಸಂಸ್ಥೆ ಇದೀಗ ಕೊರೊನಾ ಸೋಂಕಿಗೆ ಪ್ರತಿರೋಧಕ ಔಷಧಿಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ನಿಸರ್ಗ ಸಹಜ ಗಿಡಮೂಲಿಕೆಗಳನ್ನು ಬಳಸಿ ಅಭಿವೃದ್ಧಿಪಡಿಸಲಾದ ಆಯುಷ್ ಅನುಮೋದಿತ ಆಯುರ್ವೇದ ಔಷಧಿ 'ವೈರಾನಾರ್ಮ್' ಅನ್ನು ಬಿಡುಗಡೆ ಮಾಡಿದೆ. ಈ ಮೂಲಕ, ಖೋಡೆ ಸಮೂಹವು ಪರ್ಯಾಯ ಔಷಧ ಉದ್ಯಮ ಕ್ಷೇತ್ರವನ್ನು ಪ್ರವೇಶಿಸಿದೆ.

ಕ್ಯಾಪ್ಸ್ಯೂಲ್ ರೂಪದಲ್ಲಿ ಲಭ್ಯವಿರುವ 'ವೈರಾನಾರ್ಮ್' ಅನ್ನು ಅಲ್ತಿಯಾ ಡಿ.ಆರ್.ಎಫ್, ಲೈಫ್ ಸೈನ್ಸಸ್ ನ ಸಹಯೋಗದಲ್ಲಿ ಅಭಿವೃದ್ಧಿ ಪಡಿಸಲಾಗಿದೆ. ಜಾಗತಿಕ ಮಾನದಂಡಗಳಿಗೆ ಅನುಗುಣವಾಗಿ ಸುದೀರ್ಘಾವಧಿಯ 3ನೇ ಹಂತದ ಕ್ಲಿನಿಕಲ್ ಟ್ರಯಲ್ (ಚಿಕಿತ್ಸಾ ಪ್ರಯೋಗ)ಗೆ ಒಳಪಡಿಸಿದ ವಿಶಿಷ್ಟ ಆಯುರ್ವೇದ ಕ್ಯಾಪ್ಸೂಲ್ ಇದಾಗಿದೆ ಎಂದು ಖೋಡೆ ಉದ್ಯಮ ಸಮೂಹದ ಉಪಾಧ್ಯಕ್ಷ ಸ್ವಾಮಿ ಖೋಡೆ ಹೇಳಿದರು.

# ಕೋವಿಡ್ ಕೇರ್ ಸೆಂಟರ್ ಉದ್ಘಾಟನೆ

**(6ನೇ ಪುಟದಿಂದ)** ಸೋಂಕಿತರಿಗೆ ಸೂಕ್ತ ವೈದ್ಯಕೀಯ ನೆರವು ಕಲ್ಪಿಸುವ ನಿಟ್ಟಿನಲ್ಲಿ ನಿರಂತರವಾಗಿ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದ್ದುಕೊಂಡು, ಅಗತ್ಯ ವ್ಯವಸ್ಥೆ ಮಾಡುತ್ತಿದ್ದೇವೆ ಎಂದರು.

**ಕೊವಿಡ್ ರೋಗಿಗಳಿಗೆ ಮೊಟ್ಟೆ :** ಎಂ.ಆರ್.ಎಂ. ಪೌಲ್ಟ್ರಿ ಫಾರಂನ ಡಾ. ಮಲ್ಲಿಕಾರ್ಜುನ್ ಹಾಗೂ ಮಸ್ತಾನ್ ರೆಡ್ಡಿ ಅವರು ಕೊರೊನಾ ರೋಗಿಗಳಿಗೆ ವಿತರಿಸಲು 6 ಸಾವಿರ ಮೊಟ್ಟೆಗಳನ್ನು ಈ ಸಂದರ್ಭದಲ್ಲಿ ಸಂಸದರ ಮೂಲಕ ಜಿಲ್ಲಾಡಳಿತಕ್ಕೆ ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಆಯುಕ್ತ ವಿಶ್ವನಾಥ ಮುದಜ್ಜಿ, ಡಿಹೆಚ್‌ಓ ಡಾ. ನಾಗರಾಜ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಸುರೇಶ್ ಬಾರ್ಕಿ, ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾ. ನಟರಾಜ್, ಶಶಿಧರ ಹೆಮ್ಮನಬೇತೂರು ಮತ್ತಿತರರು ಉಪಸ್ಥಿತರಿದ್ದರು.

# ಮೊದಲ ಅಲೆ ನಂತರ ಸರ್ಕಾರ ಮೈ ಮರೆತಿತ್ತು : ಆರ್.ಎಸ್.ಎಸ್.

ನವದೆಹಲಿ, ಮೇ 15 - ಕೊರೊನಾದ ಮೊದಲ ಅಲೆಯ ನಂತರ ಸರ್ಕಾರ, ಆಡಳಿತ ಹಾಗೂ ಸಾರ್ವಜನಿಕರು ಎಚ್ಚರಿಕೆ ಕೈ ಬಿಟ್ಟಿದ್ದರು ಎಂದು ಆರ್.ಎಸ್.ಎಸ್. ಮುಖ್ಯಸ್ಥ ಮೋಹನ್ ಭಾಗವತ್ ತಿಳಿಸಿದ್ದಾರೆ. ಉಪನ್ಯಾಸ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದ ಅವರು, ಈ ಸವಾಲಿನ ಸಂದರ್ಭದಲ್ಲಿ ದೇಶ ಒಗ್ಗಟ್ಟಾಗಿರಬೇಕೇ ಹೊರತು, ಆರೋಪ – ಪ್ರತ್ಯಾರೋಪದಲ್ಲಿ ತೊಡಗಬಾರದು ಎಂದಿದ್ದಾರೆ.

# ಸದರನ್ ಗ್ಯಾಸ್ ವಿತರಣಾ ಕೇಂದ್ರಕ್ಕೆ ಹರಿಹರ ಶಾಸಕ ರಾಮಪ್ಪ ಭೇಟಿ



ಹರಿಹರ, ಮೇ 15- ಶಾಸಕ ಎಸ್. ರಾಮಪ್ಪ ಅವರು ಶನಿವಾರ ನಗರದಲ್ಲಿರುವ ಸದರನ್ ಗ್ಯಾಸ್ ವಿತರಣಾ ಕೇಂದ್ರಕ್ಕೆ ಭೇಟಿ ನೀಡಿ, ಆಕ್ಸಿಜನ್ ವಿತರಣೆ ವ್ಯವಸ್ಥೆ ಪರಿಶೀಲಿಸಿದರು.

# ಹವೆ ಯಂತ್ರ, ಫೇಸ್ ಶೀಲ್ಡ್ ವಿತರಣೆ



ದಾವಣಗೆರೆ, ಮೇ 15- ನಗರದ ಕುಟುಂಬ ಕಲ್ಯಾಣ ಕೇಂದ್ರ-1 ರ ಎಲ್ಲಾ ಸಿಬ್ಬಂದಿಗೂ ಡಾ. ನಾಗರಾಜ್ ಅವರ ಸಮ್ಮುಖದಲ್ಲಿ ಹವೆ ಯಂತ್ರಗಳು, ಫೇಸ್ ಶೀಲ್ಡ್, ಮಾಸ್ಕ್‌ಗಳನ್ನು ಹಿರಿಯ ಸಹಕಾರಿ ಧುರೀಣರಾಗಿದ್ದ ದಿ. ಶಾಮನೂರು ಕಲ್ಲೇಶಪ್ಪ ಅವರ ಪುತ್ರರೂ ಆದ ಎಪಿಎಂಸಿ ನಿರ್ದೇಶಕ ಎಸ್.ಕೆ. ಪವಿತ್ರ ಮತ್ತು ಮಕ್ಕಳು ವಿತರಿಸಿದರು.

# ಬಸವ ಜಯಂತಿ : ವಚನ ಪಠಣ



ದಾವಣಗೆರೆ, ಮೇ 15- ವೀರಶೈವ ತರುಣ ಸಂಘದ ವತಿಯಿಂದ ಸಂಘದ ಅಧ್ಯಕ್ಷ ಕಣಕುಪ್ಪಿ ಮುರುಗೇಶಪ್ಪ ಅವರ ನಿವಾಸದಲ್ಲಿ ಬಸವ ಜಯಂತಿ ಆಚರಿಸಲಾಯಿತು. ಬಸವೇಶ್ವರರ ವಚನ ಪಠಣ ಮಾಡಿ ಸರ್ವರಿಗೂ ಸುಖ, ಶಾಂತಿ, ನೆಮ್ಮದಿ ಸಿಗಲಿ ಎಂದು ಪ್ರಾರ್ಥಿಸಲಾಯಿತು.

# ಸಂವೇದನಾ ಶೂನ್ಯ ಧೋರಣೆ ಖಂಡಿಸಿ ಆಂದೋಲನ



## ಹರಪನಹಳ್ಳಿ

ಹರಪನಹಳ್ಳಿ, ಮೇ 15- ತಾಲ್ಲೂಕಿನ ಮೈದೂರು ಗ್ರಾಮ ಪಂಚಾಯ್ತಿಯ ಗೌರಿಪುರ, ಬೆಣ್ಣಿಹಳ್ಳಿ ಗ್ರಾಮ ಪಂಚಾಯ್ತಿ, ತೊಗರಿಕಟ್ಟಿ ಸೇರಿದಂತೆ ತಾಲ್ಲೂಕಿನ ವಿವಿಧೆಡೆ ಸರ್ಕಾರದ ಸಂವೇದನಾ ಶೂನ್ಯ ಧೋರಣೆಯನ್ನು ಖಂಡಿಸಿ, ಜನರ ಜೀವ ಮತ್ತು ಜೀವನ ಉಳಿಸುವ ದಿಟ್ಟ ಕ್ರಮಗಳಿಗೆ ಮುಂದಾಗಬೇಕೆಂದು ಆಗ್ರಹಿಸಿ ಜನಾಗ್ರಹ ಆಂದೋಲನ ಜರುಗಿತು.

ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆಯ ಶೃತಿ ಮಾತನಾಡಿ, ಕರ್ನಾಟಕ ಅಲ್ಲದೆ, ಭಾರತದಲ್ಲಿ ಕೋವಿಡ್‌ನ ಎರಡನೇ ಅಲೆ ವೇಗವಾಗಿ ಹರಡುತ್ತಿದ್ದು, ಸರ್ಕಾರ ಇನ್ನು ಹೆಚ್ಚಿನ ಕ್ರಮ ಜರುಗಿಸಿ, ಜನರ ಆತಂಕವನ್ನು ನಿವಾರಣೆ ಮಾಡಬೇಕಿದೆ. ಈಗಾಗಲೇ ಆಸ್ಪತ್ರೆಗಳಲ್ಲಿ ಬೆಡ್, ಆಕ್ಸಿಜನ್ ಹಾಗೂ ಸರಿಯಾದ ಚಿಕಿತ್ಸೆ ಸಿಗುತ್ತಿಲ್ಲ ಎಂಬ ನೋವುಗಳು ಮಾಧ್ಯಮಗಳ ಮೂಲಕ ವ್ಯಕ್ತವಾಗುತ್ತಿವೆ.

ಕೂಡಲೇ ಎಲ್ಲರಿಗೂ ಉಚಿತ ಲಸಿಕೆ ನೀಡಿರಿ. ಬಡ ಕುಟುಂಬಗಳಿಗೆ ಸಮಗ್ರ ಪಡಿತರ ವಿತರಿಸಿ, ಕೆಲಸವಿಲ್ಲದ ಕುಟುಂಬಗಳಿಗೆ ಕೋವಿಡ್ ನೆರವು ಧನ ನೀಡಿ, ಮಡಿದವರ ಕುಟುಂಬಕ್ಕೆ ಪರಿಹಾರ ನೀಡಿ ಇತ್ಯಾದಿ ಬೇಡಿಕೆಗಳ ಈಡೇರಿಕೆಗಾಗಿ ಪ್ರತಿಭಟನೆ ನಡೆಸಲಾಗುತ್ತಿದ್ದು, ಸರ್ಕಾರ ಈ ಕೂಡಲೇ ಸವಲತ್ತುಗಳನ್ನು ಕಲ್ಪಿಸಬೇಕೆಂದು ಒತ್ತಾಯಿಸಿದರು.

# ಬಸವ ಕಲಾಲೋಕದಿಂದ ಬಸವ ಜಯಂತಿ



ದಾವಣಗೆರೆ, ಮೇ 15- ಬಸವ ಕಲಾ ಲೋಕದ ಕಲಾವಿದರಿಂದ ಇಂದು 888ನೇ ಬಸವೇಶ್ವರ ಜಯಂತಿಯನ್ನು ಸರಳವಾಗಿ ಸ್ವಗೃಹದಲ್ಲಿಯೇ ಆಚರಿಸಲಾಯಿತು.

# ಎಲೆಬೇತೂರಿನಲ್ಲಿ ಸರಳ ಬಸವ ಜಯಂತಿ



ದಾವಣಗೆರೆ, ಮೇ 15- ಶ್ರೀ ಬಸವ ಗದ್ದಿಗೆ ಸಂಗಮೇಶ್ವರ ದೇವಸ್ಥಾನದಲ್ಲಿ ಜಗಜ್ಯೋತಿ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಪೂಜೆ ಸಲ್ಲಿಸುವ ಮುಖಾಂತರ ಸರಳವಾಗಿ ಬಸವ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಕಮಿಟಿ ಅಧ್ಯಕ್ಷ ಬಿ.ವಿರೂಪಾಕ್ಷಪ್ಪ, ಸದಸ್ಯರಾದ ತೋಟದ ರಾಜಪ್ಪ, ಮಠದ ಸಿದ್ದಯ್ಯ, ಮರಡಿ ಬಸವರಾಜ್, ಹಳ್ಳಿಕೇರಿ ರಾಜಪ್ಪ, ಮಾಳಿಗೇರ ಷಡಾಕ್ಷರಪ್ಪ, ಬಸವನಾಳರ ಶಿವಕುಮಾರ್, ಗೌಡ್ರು ಬಸನಗೌಡ ಉಪಸ್ಥಿತರಿದ್ದರು.

ಕನ್ಸಲ್ಟೆನ್ಸಿ ಸರ್ವೀಸಸ್
ನಮ್ಮ ಕಛೇರಿಯಲ್ಲಿ ಬಿಲ್ಡಿಂಗ್ ಪ್ಲ್ಯಾನ್ಸ್, ಎಸ್ಟಿಮೇಷನ್, ಲೇಔಟ್ ಪ್ಲ್ಯಾನ್ಸ್, ಆನ್‌ಲೈನ್ ಅಪ್‌ಲೋಡ್, ಬ್ಲೂ ಪ್ರಿಂಟ್ಸ್ ಮತ್ತು ಪ್ಲಾಟರ್ ಪ್ರಿಂಟ್ಸ್ (A4-A0 ಸೈಜ್) ಮಾಡಿಕೊಡಲಾಗುತ್ತದೆ. ಸಂಪರ್ಕಿಸಿ:
Civil
ಶ್ರೀ ವೀರಭದ್ರೇಶ್ವರ ಕನ್ಸಲ್ಟೆನ್ಸಿ ಸರ್ವೀಸಸ್ VCS
ಪಿ.ಜೆ. ಲಾಡ್ಜ್ ಎದುರು, ಎ.ವಿ.ಕೆ. ಕಾಲೇಜ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
ಮೊ. 99168 73399, 93432 77422, 99161 73399

## ಅನ್ನ ದಾಸೋಹಕ್ಕೆ ಇಂದ್ರಪ್ಪ ಗೌಡ್ರು ಅವರಿಂದ 1 ಲಕ್ಷ ರೂ.



ದಾವಣಗೆರೆ, ಮೇ 15- ಶ್ರೀನಿತ್ಯಾ ಚೇತನಾ ಚಿಟ್ಸ್ ಪ್ರೈ ಲಿ., ಮ್ಯಾನೇ ಜಿಂಗ್ ಡೈರೆಕ್ಟರ್ ಹಾಗೂ ಶ್ರೀ ಲಕ್ಷ್ಮಿ ವೆಂಕಟೇಶ್ವರ ಗ್ರಾನೈಟ್ ಮಾಲೀಕರೂ, ಬಿಜೆಪಿ ಮುಖಂಡರಾದ ಇಂದ್ರಪ್ಪ ಗೌಡ್ರು ಅವರು ಲಾಕ್ ಡೌನ್ ಸಂದರ್ಭದಲ್ಲಿ ಸಂಕಷ್ಟ ಪರಿಸ್ಥಿತಿಯಲ್ಲಿರುವ ಸೋಂಕಿತರು ಮತ್ತು ಬಡವರಿಗೆ ಉಚಿತವಾಗಿ ಅನ್ನ ದಾಸೋಹ ಮಾಡುತ್ತಿರುವ ನಗರದ ತರಳಬಾಳು ಸೇವಾ ಸಮಿತಿ ಮತ್ತು ಶಿವಸೈನ್ಯ ಯುವಕರ ಸಂಘಕ್ಕೆ ಇಂದು ಎಸ್.ಎಸ್. ಕಲ್ಯಾಣ ಮಂಟಪದಲ್ಲಿ 1 ಲಕ್ಷ ರೂ.ಗಳನ್ನು ದಾನ ಮಾಡುವುದರ ಮೂಲಕ ಸಹಾಯ ಹಸ್ತ ಚಾಚಿದ್ದಾರೆ.

**ಶ್ಲಾಘನೆ :** ಈ ಪುಣ್ಯದ ಕಾರ್ಯಕ್ಕೆ ಸಹಾಯ ಮಾಡುತ್ತಿರುವ ಇಂದ್ರಪ್ಪ ಗೌಡ್ರು ಅವರನ್ನು ಎಸ್.ಎಸ್. ಕಲ್ಯಾಣ ಮಂಟಪದಲ್ಲಿ ನಿನ್ನೆ ನಡೆದ ಸರಳ ಸಮಾರಂಭದಲ್ಲಿ ಗೌರವಾಧ್ಯಕ್ಷ ಶಶಿಧರ ಹೆಮ್ಮನಬೇತೂರು, ಮಹಾಪೌರ ಎಸ್.ಟಿ. ವೀರೇಶ್ ಅವರು ಸನ್ಮಾನಿಸಿ, ಗೌರವಿಸಿದರು.

ಈ ಸಂದರ್ಭದಲ್ಲಿ ಸಂಘದ ಗೌರವಾಧ್ಯಕ್ಷ ಶಶಿಧರ್ ಹೆಮ್ಮನಬೇತೂರು, ಮಹಾನಗರ ಪಾಲಿಕೆ ಮಹಾಪೌರ ಎಸ್.ಟಿ. ವೀರೇಶ್, ಮಾಗನೂರು ಉಮೇಶ್ ಗೌಡ್ರು, ಲಿಂಗರಾಜ್ ಅಗಸನಕಟ್ಟೆ, ಶ್ರೀನಿವಾಸ್ ಮೆಳ್ಳೇಕಟ್ಟೆ, ಪ್ರಭು ಕಾವಲಹಳ್ಳಿ, ಶಿವಕುಮಾರ್ ಕೊರಟಿಕೆರೆ, ಹಾಲೇಶ್ ಕಂಸಾಗರ, ಹರೀಶ್ ಬೆಳ್ಳಿಗನೂಡು ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಸ್ಟಿರಾಯ್ಡ್ : ಬ್ಲಾಕ್ ಫಂಗಸ್ ಉಲ್ಬಣ

ನವದೆಹಲಿ, ಮೇ 15 – ಕೊರೊನಾಗೆ ಚಿಕಿತ್ಸೆ ನೀಡುವಾಗ ಸ್ಟಿರಾಯ್ಡ್‌ಗಳನ್ನು ದುರ್ಬಳಕೆ ಮಾಡಿಕೊಂಡಿರುವುದೇ ಬ್ಲಾಕ್ ಫಂಗಸ್ ರೋಗ ಹೆಚ್ಚಾಗಲು ಕಾರಣ ವಾಗಿದೆ ಎಂದು ಎಐಐಎಂಎಸ್ ಮುಖ್ಯಸ್ಥ ಡಾ. ರಣದೀಪ್ ಗುಲೇರಿಯ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತ ನಾಡುತ್ತಿದ್ದ ಅವರು, ಸಕ್ಕರೆ ಕಾಯಿಲೆ ಯಿಂದ ಬಳಲುತ್ತಿರುವವ ರಲ್ಲಿ ಹಾಗೂ ಸ್ಟಿರಾಯ್ಡ್ ಸೇವಿಸಿದವರಲ್ಲಿ ಬ್ಲಾಕ್ ಫಂಗಸ್ ರೋಗ ಹೆಚ್ಚಾಗಿ ಕಂಡು ಬರುತ್ತಿದೆ. ಸ್ಟಿರಾಯ್ಡ್ ದುರ್ಬ ಳಕೆ ತಡೆಯಬೇಕಿದೆ ಎಂದಿದ್ದಾರೆ.

# ತರಳಬಾಳು ಕೋವಿಡ್ ಕೇರ್ ಸೆಂಟರ್ ಉದ್ಘಾಟನೆ






ದಾವಣಗೆರೆ, ಮೇ 15 - ನಗರದ ಶಿರಮಗೊಂಡನಹಳ್ಳಿಯಲ್ಲಿರುವ ಶ್ರೀ ತರಳಬಾಳು ಜಗದ್ಗುರು ಮಹಿಳಾ ವಿದ್ಯಾರ್ಥಿ ನಿಲಯವನ್ನು ಕೋವಿಡ್ ಕಾಳಜಿ ಕೇಂದ್ರವಾಗಿ ಪರಿವರ್ತಿಸಲಾಗಿದ್ದು, ಇದನ್ನು ಸಂಸದ ಜಿ.ಎಂ. ಸಿದ್ದೇಶ್ವರ ಉದ್ಘಾಟಿಸಿದ್ದಾರೆ.

ಈ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಈ ಕೇಂದ್ರದಲ್ಲಿ 30 ಕೋಣೆಗಳನ್ನು ಪಡೆಯಲಾಗಿದ್ದು 90 ಬೆಡ್‌ಗಳನ್ನು ಅಳವಡಿಸಲಾಗಿದೆ ಎಂದು ಹೇಳಿದರು.

ಕೋವಿಡ್ ಕೇಂದ್ರ ತೆರೆಯಲು ಹಾಸ್ಟೆಲ್ ನೀಡಿರುವುದಕ್ಕಾಗಿ ತರಳಬಾಳು ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರಿಗೆ ಧನ್ಯವಾದ ಸಲ್ಲಿಸುವುದಾಗಿ ಹೇಳಿದ ಅವರು, ತರಳಬಾಳು ಸೇವಾ ಸಂಸ್ಥೆಯ ವತಿಯಿಂದ ಊಟ ಹಾಗೂ ತಿಂಡಿ ವ್ಯವಸ್ಥೆಯಾಗಲಿದೆ ಎಂದು ಹೇಳಿದರು.

ಮನೆಯಲ್ಲಿ ಪ್ರತ್ಯೇಕ ಕೋಣೆಯ ವ್ಯವಸ್ಥೆ ಇದೆ ಎಂದು ಪ್ರತ್ಯೇಕವಾಗಿರದೇ ಈ ಕೇಂದ್ರಕ್ಕೆ ಸೋಂಕಿತರು ಬರಬೇಕು. ಆ ಮೂಲಕ ಮನೆಯವರಿಗೆ ಹಾಗೂ ಬೇರೆಯವರಿಗೆ ಸೋಂಕು ಹರಡದಂತೆ ತಡೆಯಬಹುದು ಎಂದು ಸಿದ್ದೇಶ್ವರ ತಿಳಿಸಿದರು. ಶಾಸಕ ಎಸ್.ಎ. ರವೀಂದ್ರನಾಥ್ ಮಾತನಾಡಿ, ಕೋವಿಡ್ (5ನೇ ಪುಟಕ್ಕೆ)

## ಚಂಡಮಾರುತ ಎದುರಿಸಲು ಎನ್‌ಡಿಆರ್‌ಎಫ್‌ನ 100 ತಂಡ

ನವದೆಹಲಿ ಮೇ 15 – ತೌಕ್ತೆ ಚಂಡಮಾರುತದ ಹಿನ್ನೆಲೆಯಲ್ಲಿ ನೆರವು ಹಾಗೂ ರಕ್ಷಣಾ ಕಾರ್ಯಾಚರಣೆಗಳಿಗಾಗಿ ರಾಷ್ಟ್ರೀಯ ವಿಕೋಪ ಸ್ಪಂದನಾ ದಳ (ಎನ್.ಡಿ.ಆರ್.ಎಫ್.) 100 ತಂಡಗಳನ್ನು ರಾಜ್ಯಗಳಿಗೆ ರವಾನಿಸಿದೆ. ಪ್ರತಿಯೊಂದು ತಂಡದಲ್ಲಿ 47 ಸದಸ್ಯರಿರಲಿದ್ದಾರೆ. ಈ ಬಗ್ಗೆ ಟ್ವೀಟ್ ಮಾಡಿರುವ ಎನ್.ಡಿ.ಆರ್.ಎಫ್. ಪ್ರಧಾನ ನಿರ್ದೇಶಕ ಎಸ್.ಎನ್. ಪ್ರಧಾನ್, ಕೇರಳ ಕರ್ನಾಟಕ, ತಮಿಳುನಾಡು, ಗುಜರಾತ್, ಗೋವ ಹಾಗೂ ಮಹಾರಾಷ್ಟ್ರಗಳ ಕರಾವಳಿಗಳಲ್ಲಿ ತಂಡಗಳನ್ನು ನಿಯೋಜಿಸಲಾಗುವುದು ಎಂದಿದ್ದಾರೆ.

## ಜಿಲ್ಲೆಯಲ್ಲಿ 292 ಸೋಂಕು ಪತ್ತೆ

ದಾವಣಗೆರೆ, ಮೇ 15 – ಜಿಲ್ಲೆಯಲ್ಲಿ ಶನಿವಾರ 292 ಕೊರೊನಾ ಸೋಂಕಿತರು ಕಂಡು ಬಂದಿದ್ದು, ಇಬ್ಬರು ಸಾವನ್ನಪ್ಪಿದ್ದಾರೆ.

ಇದೇ ದಿನ 487 ಜನ ಕೊರೊನಾದಿಂದ ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ.

ದಾವಣಗೆರೆ ತಾಲ್ಲೂಕಿನಲ್ಲಿ 145, ಹರಿಹರದಲ್ಲಿ 34, ಜಗಳೂರಿನಲ್ಲಿ 25, ಚನ್ನಗಿರಿಯಲ್ಲಿ 56, ಹೊನ್ನಾಳಿ ಯಲ್ಲಿ 20 ಹಾಗೂ ಹೊರ ಜಿಲ್ಲೆಗಳ 12 ಸೋಂಕಿತರು ಕಂಡು ಬಂದಿದ್ದಾರೆ. ಚನ್ನಗಿರಿಯ 60 ವರ್ಷದ ಮಹಿಳೆ ಹಾಗೂ ದಾವಣಗೆರೆಯ ಆಂಜನೇಯ ಬಡಾವಣೆಯ 68 ವರ್ಷದ ವ್ಯಕ್ತಿ ಕೊರೊನಾ ಸೋಂಕಿನಿಂದ ಸಾವನ್ನಪ್ಪಿದ್ದಾರೆ.

Girmilk
Healthy cow = Healthy Milk
100% Pure Bred Desi Gir Cows, Fed With **Ayurvedic Herbs** And **Special Minerals.** A Holistic And Wholesome Diet For The Cows.
Shatawari Tulsi Turmeric Ginger Garlic Jaggery
A2 Protein GIR Cow milk PURE



Available in 500 Ml, 1L Packs
Pure Ghee Made of Desi A2 Gir Milk is also available.
Buttermilk and Butter from gir Milk is also available.
Kasal Inc, +91 99021 85212, +91 70194 81919
Dairy at Mandalur, Davanagere.

## ನಿಟುವಳ್ಳಿಯ ಶಾಂತಮ್ಮ ನಿಧನ



ದಾವಣಗೆರೆ ಸಿಟಿ ನಿಟುವಳ್ಳಿಯ ಸರಸ್ವತಿ ನಗರದ ದುರ್ಗಾಂಬಿಕಾ ಶಾಲೆ ರಸ್ತೆಯ ವಾಸಿ ಶ್ರೀ ರಾಘವೇಂದ್ರಪ್ಪ ಇವರ ಧರ್ಮಪತ್ನಿ **ಶ್ರೀಮತಿ ಶಾಂತಮ್ಮನವರು** ದಿನಾಂಕ 15.05.2021ರ ಶನಿವಾರ ಸಂಜೆ 4.15 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 74 ವರ್ಷ ವಯಸ್ಸಾಗಿತ್ತು. ಪತಿ, ಮೂವರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 16.05.2021ನೇ ಭಾನುವಾರ ಬೆಳಿಗ್ಗೆ 10 ಗಂಟೆಗೆ ಯರಗುಂಟೆ ಗ್ರಾಮದ ಮೃತರ ಸ್ವಂತ ಜಮೀನಲ್ಲಿ ನೆರವೇರಿಸಲಾಗುವುದು.

ಇವರ ಆತ್ಮಕ್ಕೆ ಶಾಂತಿ ಕೋರುವವರು :

**ಶ್ರೀಮತಿ ಕಮಲಮ್ಮ ತೋಟದ ಹೆಚ್.ಬಿ. ಹನುಮಂತಪ್ಪ ಮತ್ತು ಮಕ್ಕಳು, ನಿಟುವಳ್ಳಿ.**

ಶಿವ

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 15.05.2021ರಂದು ನಿಧನರಾದ
ದಾವಣಗೆರೆ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರೂ,
ಹಿರಿಯರೂ ಹಾಗೂ ನಮ್ಮ ಮಾರ್ಗದರ್ಶಕರೂ ಆಗಿದ್ದ
**ಶ್ರೀ ಎಂ.ಟಿ. ಬಸವನಗೌಡ್ರು**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಕುಟುಂಬ ವರ್ಗಕ್ಕೆ ಅವರ ಅಗಲಿಕೆಯ ಭರಿಸುವ ಶಕ್ತಿಯನ್ನು ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

✦ **ಪ್ರಕಾಶ್ ಹೊನ್ನೂರು**
✦ **ಗಿರೀಶ್ ಹೊನ್ನೂರು**

## ಮಳಲ್ಕೆರೆ ಗುಡ್ಡದರ ಇಂಜಿನಿಯರ್ ಜಿ.ಎನ್. ಸಿದ್ದಬಸಪ್ಪ ನಿಧನ



**Rtn : PHF, Er. ಜಿ.ಎನ್. ಸಿದ್ದಬಸಪ್ಪ**
B.Sc, B.E, M.E, FIV, FIE

ದಾವಣಗೆರೆ ಎಂ.ಸಿ.ಸಿ. ಬಿ ಬ್ಲಾಕ್ ವಾಸಿ,
ಹೆಸರಾಂತ ಹಿರಿಯ ಸಿವಿಲ್ ಇಂಜಿನಿಯರ್ ಹಾಗೂ ರೋಟರಿ ಕ್ಲಬ್ಬಿನ ಹಿರಿಯ ಸದಸ್ಯರಾದ
**ಶ್ರೀ ಜಿ.ಎನ್. ಸಿದ್ದಬಸಪ್ಪ** ಅವರು
ದಿನಾಂಕ 15.5.2021ರ ಶನಿವಾರ ತಡರಾತ್ರಿ 12.05ಕ್ಕೆ ತಮ್ಮ ಸ್ವಗೃಹದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 82 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 16.5.2021ರ ಭಾನುವಾರ ಮಧ್ಯಾಹ್ನ 2 ಗಂಟೆಗೆ ದಾವಣಗೆರೆ ತಾಲ್ಲೂಕು ಮಳಲ್ಕೆರೆ ಗ್ರಾಮದಲ್ಲಿರುವ ಮೃತರ ಸ್ವಂತ ತೋಟದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ

- ✦ ಶ್ರೀಮತಿ ಶಾರದಮ್ಮ ಸಿದ್ದಬಸಪ್ಪ
- ✦ ಶ್ರೀಮತಿ ಮಹಾದೇವಮ್ಮ ನಲ್ಕುದುರೆ
- ✦ ಶ್ರೀಮತಿ ರತ್ನಮ್ಮ ಗಾಣದಾಳ್
- ✦ ಶ್ರೀಮತಿ ಸುಧಾ, ಡಾ. ಸೋಮಶೇಖರ್ ಕೆ.ಎಸ್.
- ✦ ಡಾ. ಸಂಗೀತ್, ಡಾ. ಮಲ್ಲಿಕಾರ್ಜುನ ಗೌಡ
- ✦ ಶ್ರೀಮತಿ ಸ್ಫೂರ್ತಿ, ಶ್ರೀ ಗಿರೀಶ್
- ✦ ಡಾ. ಕಾವೇರಿ, ಡಾ. ಸಿದ್ದೇಶ್

ಮತ್ತು ಕುಟುಂಬ ವರ್ಗದವರು, ಗುಡ್ಡದರ ವಂಶಸ್ಥರು ಹಾಗೂ ಬಂಧು-ಮಿತ್ರರು.

**JANATHAVANI** - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte